ನೈಸರ್ಗಿಕವಾಗಿ ನೀರು ಹರಿಸುವ ಮೂಲಕ fluride ಅಂಶ ಕಡಿಮೆಯಾಗುವುದಕ್ಕೆ ಆದ್ಯತೆಯೋ ಎಂಬ ಬಗ್ಗೆ clarify ಮಾಡಿ.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಸದಸ್ಯರು ಹೇಳಿದ ಹಾಗೆ, ನೈಸರ್ಗಿಕವಾಗಿ ಹರಿದು ಬರುವ ನೀರು ಏನಿದೆ ಅದಕ್ಕೆ ಪೂರಕವಾಗಿ ಕುಡಿಯುವ ನೀರಿನ ಯೋಜನೆ ಜಾರಿಗೆ ತರಬೇಕಾಗಿದೆ ಅದಕ್ಕೆ ನಾವು ಆದ್ಯತೆ ಕೊಡುತ್ತೇವೆ. ಹೀಗಾಗಿ, ಹಿಂದೆ ಏನೇನಾಗಿದೆ ಎನ್ನುವ ವಿಚಾರ ಬಿಟ್ಟು, ಬರುವ ದಿವಸಗಳಲ್ಲಿ ಆ ರೀತಿಯಾದ ಯೋಜನೆ ನಿರೂಪಣೆ ಮಾಡಿದರೆ ಎಲ್ಲಾ ದೃಷ್ಟಿಯಿಂದ ಅನುಕೂಲವಾಗುತ್ತದೆ ಮತ್ತು ಕಾಸ್ಟ್ ಕಡಿಮೆಯಾಗುತ್ತದೆ. ಆ ದೃಷ್ಟಿಯಿಂದ ವಿಚಾರ ಮಾಡುತ್ತೇವೆ. ತಮ್ಮ ಸಲಹೆ ಬಹಳ ಅತ್ಯುತ್ತಮವಾದ ಸಲಹೆಯಾಗಿದೆ. ಅದನ್ನು ಬಹಳ serious ಆಗಿ ತೆಗೆದುಕೊಂಡು ಬರುವ ಯೋಜನೆಯೊಳಗಡೆ ಅದನ್ನು adopt ಮಾಡಿಕೊಳ್ಳುತ್ತೇವೆ.

ವಿಷಯ: ಕರ್ನಾಟಕ ವಾಯುವ್ಯ ರಸ್ತೆ ಸಾರಿಗೆ ಸಂಸ್ಥೆಗೆ ಕರದಿಂದ ಮುಕ್ತಗೊಳಿಸುವ ಬಗ್ಗೆ.

ಶ್ರೀ ಶ್ರೀಕಾಂತ್ ಕುಲಕರ್ಣಿ(ಜಮಖಂಡಿ): ಮಾನ್ಯ ಅಧ್ಯಕ್ಷರೆ, ಕರ್ನಾಟಕ ವಾಯುವ್ಯ ರಸ್ತೆ ಸಾರಿಗೆ ಸಂಸ್ಥೆಗೆ ರಸ್ತೆ ಕರದಿಂದ ಮುಕ್ತಗೊಳಿಸುವ ಬಗ್ಗೆ ಮಾನ್ಯ ಸಾರಿಗೆ ಹಾಗೂ ಆಹಾರ ಮತ್ತು ನಾಗರೀಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಗೋವಿಂದ ಎಂ ಕಾರಜೋಳ (ಸಣ್ಣ ನೀರಾವರಿ ಸಚಿವರು)–(ಸಾರಿಗೆ ಹಾಗೂ ಆಹಾರ ಮತ್ತು ನಾಗರೀಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳು ಸಚಿವರ ಪರವಾಗಿ): ಮಾನ್ಯ ಅಧ್ಯಕ್ಷರೆ,

ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯನ್ನು ದಿವಾಳಿಯ ಅಂಚಿನಿಂದ ರಕ್ಷಿಸಲು 2010–11 ನೇ ಸಾಲಿನಲ್ಲಿ 350.00 ಕೋಟಿ ರೂಗಳ ವಿಶೇಷ ಅನುದಾನ ನೀಡುವ ಮೂಲಕ ಹಾಗೂ ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಗೆ ನೀಡಿರುವ ಮೋಟಾರು ವಾಹನ ತೆರಿಗೆ ವಿನಾಯಿತಿಯನ್ನು ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಗೂ ವಿಸ್ತರಿಸುವಂತೆ ಆ ಕ್ಷೇತ್ರದ ಪ್ರಜಾ ಪ್ರತಿನಿಧಿಗಳು ಮಾನ್ಯ ಮುಖ್ಯ ಮಂತ್ರಿಯವರನ್ನು ಕೋರಿರುತ್ತಾರೆ.

ಮೇಲೆ ವಿವರಿಸಿರುವ ಹಿನ್ನೆಲೆಯಲ್ಲಿ ಮತ್ತು ಈ ಕೆಳಕಾಣಿಸಿರುವ ವಾಸ್ತವಾಂಶಗಳ ಹಿನ್ನೆಲೆಯಲ್ಲಿ ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಗೆ ಮೋಟಾರು ವಾಹನ ತೆರಿಗೆ ಪಾವತಿಯಿಂದ ವಿನಾಯಿತಿ ನೀಡುವ ಪ್ರಸ್ತಾವನೆಯನ್ನು ಪರಿಶೀಲಿಸಲಾಗುತ್ತಿದೆ.

i) ನೌಕರರಿಗೆ ನಿಗಧಿತ ದಿನಾಂಕಗಳಂದು ವೇತನ ಪಾವತಿಸದಿದ್ದಲ್ಲಿ ನೌಕರರು ಜೀವನ ನಿರ್ವಹಣೆಗೆ ಬೇರೇ ಮಾರ್ಗೋಪಾಯಗಳನ್ನು ಕಂಡುಕೊಂಡಲ್ಲಿ ಸಾರಿಗೆ ಕಾರ್ಯಚರಣೆ ತುಂಬ ಏರುಪೇರಾಗಬಹುದು.

ii) ಸಂಸ್ಥೆಯ ತನ್ನ ಕಾರ್ಯ ವ್ಯಾಪ್ತಿಯ ಒಟ್ಟು 5217 ಹಳ್ಳಿಗಳ ಪೈಕಿ 5028 ಹಳ್ಳಿಗಳಿಗೆ ಸಾಮಾಜಿಕ ಹೊಣೆಗಾರಿಕೆ ದೃಷ್ಟಿಯಿಂದ ಮತ್ತು ರಾಜ್ಯದ ಹಳ್ಳಿಯ ಜನತೆಗೆ ಸಾರಿಗೆ ಸೌಲಭ್ಯವನ್ನು ಕಲ್ಪಿಸುವ ದೃಷ್ಟಿಯಿಂದ, ಸಾರಿಗೆ ಸೌಕರ್ಯ ಕಲ್ಪಿಸುತ್ತಿದ್ದು ಇದರಿಂದಾಗಿ ಸಂಸ್ಥೆಯು ಪ್ರತಿ ಕಿ.ಮೀ. 5.45 ರೂಗಳಷ್ಟು ನಷ್ಟ ಅನುಭವಿಸುತ್ತಿದೆ. ಇದರಿಂದ ವಾರ್ಷಿಕ ಸುಮಾರು 100 ರಿಂದ 120 ಕೋಟಿ ರೂಗಳಷ್ಟು ನಷ್ಟ ಅನುಭವಿಸುತ್ತಿದೆ.

iii) ಪ್ರಕೃತಿ ವಿಕೋಪದಿಂದ ತತ್ತರಿಸಿರುವ ಆ ಭಾಗದ ಜನತೆಗೆ ಸಾರಿಗೆ ಸೌಕರ್ಯ ಮತ್ತು ಮೂಲಭೂತ ಸೌಕರ್ಯ ಕಲ್ಪಿಸಬೇಕಾಗಿರುತ್ತದೆ.

iv) ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯನ್ನು ಆರ್ಥಿಕವಾಗಿ ಸದೃಡಗೊಳಿಸಲು ಎಲ್ಲಾ ರೀತಿಯ ಮಾರ್ಗೋಪಾಯಗಳನ್ನು ಕಂಡುಕೊಳ್ಳಲಾಗುತ್ತಿದೆ.

ಅದುದರಿಂದ ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಗೆ ಕನಿಷ್ಟ ಐದು ವರ್ಷಗಳವರೆಗೆ ಮೋಟಾರು ವಾಹನ ತೆರಿಗೆ ಪಾವತಿಯಿಂದ ವಿನಾಯಿತಿ ನೀಡುವ ಪ್ರಸ್ತಾವನೆ ಆರ್ಥಿಕ ಇಲಾಖೆಯ ಪರಿಶೀಲನೆಯಲ್ಲಿದೆ.

ಶ್ರೀ ಶ್ರೀಕಾಂತ್ ಕುಲಕರ್ಣಿ: ವಿಶೇಷವಾಗಿ ಉತ್ತರ ಕರ್ನಾಟಕದ ಮುಂಬೈ ಕರ್ನಾಟಕ ಭಾಗದಲ್ಲಿ ಈ ಸಾರಿಗೆ ಸಂಸ್ಥೆಗೆ ಸಾರ್ವಜನಿಕರಿಗೆ

ಪ್ರಯಾಣದ ವ್ಯವಸ್ಥೆ ಮಾಡುವ ಜವಾಬ್ದಾರಿ ಇದೆ. ಈ ಸಂಸ್ಥೆ ಕಳೆದ ಅನೇಕ ವರ್ಷಗಳಿಂದ ದೊಡ್ಡ ಪ್ರಮಾಣದಲ್ಲಿ ಅಂದರೆ ಸುಮರು 330 ಕೋಟಿ ರೂಪಾಯಿಗಳಷ್ಟು ಹಾನಿಯಲ್ಲಿತ್ತು. ಮಾನ್ಯ ಮಂತ್ರಿಯವರು ಉತ್ತರ ಕೊಡುವಾಗ ಪ್ರತಿ ವರ್ಷ ಆ ಸಂಸ್ಥೆ ಹಾನಿಯಲ್ಲಿ ಬರುತ್ತಿದೆ ಎಂದು ಒಪ್ಪಿಕೊಂಡಿದ್ದಾರೆ. ಪ್ರತಿ ವರ್ಷ 60–65 ಕೋಟಿ ರೂಪಾಯಿಗಳಷ್ಟು ಹಾನಿಯಲ್ಲಿ ಓಡುತ್ತಿರುವ ಈ ಸಂಸ್ಥೆ ಗ್ರಾಮಾಂತರ ಭಾಗದಲ್ಲಿ ವಿಶೇಷವಾಗಿ ಪ್ರಯಾಣಿಕರಿಗೆ ವ್ಯವಸ್ಥೆ ಮಾಡಲಿಕ್ಕೆ ಸಾಧ್ಯವಾಗುತ್ತಿಲ್ಲ. 2008ರಿಂದ ನಿವೃತ್ತರಾದ ನೌಕರರಿಗೆ ಸಿಗಬೇಕಾದ ಸೌಲಭ್ಯ ಸಿಕ್ಕಿಲ್ಲ. ಈ ಸಂಸ್ಥೆಗೆ ಬೇಕಾಗುವ tyre, oil, ಬಿಡಿಭಾಗಗಳನ್ನು ಪೂರೈಸಿದ ಅನೇಕ ಗುತ್ತಿಗೆದಾರರಿಗೆ ಇನ್ನೂ ಸುಮಾರು 120 ಕೋಟಿ ರೂಪಾಯಿಗಳಷ್ಟು ಬಾಕಿ ಕೊಡಬೇಕಾಗಿದೆ. ಇವತ್ತು ಸಂಸ್ಥೆ ಮೇಲೆ ಸುಮಾರು 310 ಕೋಟಿ ರೂಪಾಯಿಗಳಷ್ಟು ಸಾಲ ಇದೆ. ಬಹಳ ವಿಷಾದದಿಂದ ಹೇಳಬೇಕಾದರೆ ಈ ಸಂಸ್ಥೆಗೆ working capital ಇಲ್ಲ. ಯಾವುದೇ ರೀತಿಯ ಅಭಿವೃದ್ಧಿ ಕೆಲಸಗಳನ್ನು ಮಾಡಲಿಕ್ಕೆ ಆಗುತ್ತಿಲ್ಲ. ಆ ಭಾಗದಲ್ಲಿ ಅನೇಕ bus stand ಗಳು ಇವತ್ತಿಗೂ repair ಇಲ್ಲದೆ ಓಬಿರಾಯನ ಕಾಲದ ರೀತಿಯ ಹಳೆಯ ಕಟ್ಟಡದಲ್ಲಿಯೇ bus stand ಗಳಿವೆ. ಸಾವಾಜನಿಕರಿಗೆ ಬೇಕಾದ ಯಾವುದೇ ರೀತಿಯ ಸಂಪನ್ಮೂಲಗಳ ವ್ಯವಸ್ಥೆ ಆಗಿಲ್ಲ. ಶುದ್ಧವಾದ ಕುಡಿಯುವ ನೀರಿಲ್ಲ. Toilet ವ್ಯವಸ್ಥೆ ಇಲ್ಲ. ಮಳೆಯಾದಾಗ bus stand ನಿಂದ ನೀರು ಹೊರಹೋಗಲಾರದ ಸ್ಥಿತಿ ಇದೆ. ಇಂಥ ಪರಿಸ್ಥಿತಿಯಲ್ಲಿ ಏನಾದರೂ ಅಭಿವೃದ್ಧಿ ಮಾಡಬೇಕೆಂದರೆ ಆ ಸಂಸ್ಥೆಗೆ ಲಾಭವಾಗಬೇಕಾಗುತ್ತದೆ. ಅದು ಆಗದಿದ್ದುರಿಂದ ವರ್ಷ ವರ್ಷ ಆ ಸಂಸ್ಥೆ ದಿವಾಳಿ ಅಂಚಿಗೆ ಬಂದು ಬಹುಶ: ಆ ಸಂಸ್ಥೆ ಬಂದ್ ಆಗಿ ಸಾರ್ವಜನಿಕರಿಗೆ ತುಂಬಾ ತೊಂದರೆಯಾಗಬಹುದೆನ್ನುವ ಭಯ ನನಗೆ ಬಂದಿದೆ. ಈಸಾನ್ಯ ಕರ್ನಾಟಕ ಸಾರಿಗೆ ಸಂಸ್ಥೆಗೆ ಕರ್ನಾಟಕ ಸರ್ಕಾರದವರು ಆ ಸಂಸ್ಥೆ ಸಂಗ್ರಹಿಸಬೇಕಾದ 5% road tax, .5% cess ಅನ್ನು ಮನ್ನಾ ಮಾಡಿದ್ದರಿಂದ ಇವತ್ತು ಆ ಸಂಸ್ಥೆ ಲಾಭದಲ್ಲಿದ್ದು ಸಾರ್ವಜನಿಕರಿಗೆ ಬೇಕಾದ ಎಲ್ಲಾ ವ್ಯವಸ್ಥೆ ಮಾಡುತ್ತಿದೆ. ಈ ಸಂದರ್ಭದಲ್ಲಿ ನಾನು ಸರ್ಕಾರಕ್ಕೆ

ವಿನಂತಿಸುವುದೇನೆಂದರೆ, ಈಶಾನ್ಯ ಭಾಗದ ಸಾರಿಗೆ ಸಂಸ್ಥೆಗೆ ಯಾವ ರೀತಿ 5.5% road tax & cess tax ಮನ್ನಾ ಮಾಡಿದೆ, ಅದೇ ರೀತಿ, ಈ ವಾಯುವ್ಯ ಕರ್ನಾಟಕ ಸಾರಿಗೆ ಸಂಸ್ಥೆಗೂ ಮನ್ನಾ ಮಾಡಿದಾಗ ಮಾತ್ರ ಅದನ್ನು ಅಭಿವೃದ್ಧಿ ಮಾಡಲಿಕ್ಕೆ ಸಾಧ್ಯವಾಗುತ್ತದೆ. ಸರ್ಕಾರ ಅನೇಕ ರಿಯಾಯತಿಗಳನ್ನು ಕೊಟ್ಟಿದೆ. ವಿಶೇಷವಾಗಿ ವಿದ್ಯಾರ್ಥಿಗಳಿಗೆ ಕೊಟ್ಟಿರುವಂಥ students reimbursement ವರ್ಷಕ್ಕೆ 47 ರಿಂದ 50 ಕೋಟಿ ರೂಪಾಯಿಗಳಾಗುತ್ತದೆ.

ಅಧ್ಯಕ್ಷರು: ನೀವು clarification ಕೇಳಿ.

ಶ್ರೀ ಶ್ರೀಕಾಂತ್ ಕುಲಕರ್ಣಿ: ಈ 47–50 ಕೋಟಿ ರೂಪಾಯಿಗಳನ್ನು 5.5.% tax ನಲ್ಲಿ adjustment ಮಾಡಿದರೆ ಒಂದು ಪೈಸೆ ಸಹ ಆ ಸಂಸ್ಥೆಗೆ ಬರದೆ ಯಾವುದೇ ರೀತಿ ಅಭಿವೃದ್ಧಿ ಮಾಲಿಕ್ಕೆ ಸಾಧ್ಯವಾಗುವುದಿಲ್ಲ.

ಅಧ್ಯಕ್ಷರು: ತಾವು clarification ಕೇಳಿ. ಭಾಷಣಕ್ಕೆ ನಿಂತರೆ ಹೇಗೆ? ಇದು clarification ಆಗುವುದಿಲ್ಲ. ಇರಬಹುದು. ಬೇರೆ ನಿಯಮದಲ್ಲಿ ಚರ್ಚೆಗೆ ಬಂದಾಗ ಈ ವಿಷಯವನ್ನು ಮಾತನಾಡಿ. clarification ಗೆ ಹೀಗೆಲ್ಲ ಕೇಳುತ್ತಿದ್ದರೆ ಹೇಗೆ?

ಶ್ರೀ ಶ್ರೀಕಾಂತ್ ಕುಲಕರ್ಣಿ: ನಮ್ಮ ಭಾಗದಲ್ಲಿ ನಮ್ಮ ಕ್ಷೇತ್ರದಲ್ಲಿ ಗ್ರಾಮಾಂತರ ಭಾಗದಲ್ಲಿ ಸಾರಿಗೆ ವ್ಯವಸ್ಥೆ ಸರಿಯಾಗಿಲ್ಲ.

ಅಧ್ಯಕ್ಷರು: ನೀವು ಗಮನ ಸೆಳೆಯುವುದಕ್ಕೆ ಎಷ್ಟು ಬೇಕೋ ಅಷ್ಟನ್ನು ಮಾತ್ರ ಕೇಳಿ. ಅಲ್ಲಿ ಕೊಟ್ಟ ಉತ್ತರದ ಮೇಲೆ clarification ಕೇಳಬೇಕಾಗುತ್ತದೆ. ಇಲ್ಲ. ಆ ರೀತಿ ಮಾತನಾಡಿದರೆ ಅವಕಾಶ ಕೊಡುವುದಿಲ್ಲ.

ಶ್ರೀ ಶ್ರೀಕಾಂತ್ ಕುಲಕರ್ಣಿ: Finance Department ಗೆ ಪತ್ರ ಬರೆದಿದ್ದೇವೆಂದು ಮಾನ್ಯ ಮಂತ್ರಿಯವರು ಉತ್ತರ ಕೊಟ್ಟರು. ನಾನು ತಮ್ಮ ಮುಖಾಂತರ ಮಾನ್ಯ ಮುಖ್ಯಮಂತ್ರಿಯವರಲ್ಲಿ ಆ ಭಾಗದ ಜನರ ಪರವಾಗಿ ವಿನಂತಿ ಮಾಡಿಕೊಳ್ಳುತ್ತೇನೆ. ತಕ್ಷಣ ಅದನ್ನು ಜಾರಿಗೆ ತಂದು ಆ ಸಂಸ್ಥೆಯನ್ನು ಉದ್ಧಾರ ಮಾಡುವ ವ್ಯವಸ್ಥೆ ಮಾಡಬೇಕು.

ಶ್ರೀ ಗೋವಿಂದ ಎಂ ಕಾರಜೋಳ: ಮಾನ್ಯ ಸದಸ್ಯರು ನಿವೃತ್ತಿ ಹೊಂದಿದ ನೌಕರರಿಗೆ ನಿವೃತ್ತಿ ವೇತನ ಮತ್ತು ಅವರಿಗೆ ಬರಬೇಕಾದ ಬಾಕಿ ಬಂದಿಲ್ಲವೆಂದು ಸರ್ಕಾರದ ಗಮನಕ್ಕೆ ತಂದಿದ್ದಾರೆ. ಸಂಸ್ಥೆಯಲ್ಲಿ spare parts, tyre, tube ಇಲ್ಲವೆಂದು ಹೇಳಿದ್ದಾರೆ. ಅದೆಲ್ಲದಕ್ಕೂ ಸರ್ಕಾರ ವ್ಯವಸ್ಥೆ ಮಾಡುತ್ತದೆ. ಅವರು tax ಬಗ್ಗೆ ಮಾತನಾಡಿದ್ದಾರೆ. Tax ವಿಷಯ ಸರ್ಕಾರ ಪರಿಶೀಲನೆಯಲ್ಲಿರುವುದರಿಂದ ಒಂದು ಸಭೆ ಕರೆದು ನಿರ್ದಿಷ್ಟ ನಿರ್ಣಯ ತೆಗೆದುಕೋಳ್ಳಲಾಗುವುದು.

ಇ) ವಿಷಯ: ಪಶ್ಚಿಮ ಘಟ್ಟಗಳಿಂದ ಹರಿದು ವ್ಯರ್ಥವಾಗಿ ಸಮುದ್ರ ಸೇರುತ್ತಿರುವ ನೀರನ್ನು ಬಯಲುಸೀಮೆ ಪ್ರದೇಶಗಳಿಗೆ ಕುಡಿಯುವ ನೀರಿನ ಉಪಯೋಗಕ್ಕಾಗಿ ಡಾ: ಪರಮಶಿವಯ್ಯನವರ ವರದಿಯನ್ನಾಧರಿಸಿ N.R.S.A ಸಂಸ್ಥೆಗೆ ಸಮೀಕ್ಷೆ ನಡೆಯಲು ವಹಿಸಿದ್ದು ಈ ಕುರಿತಂತೆ ಇತ್ತೀಚಿನ ವರದಿ ಹಾಗೂ ಪ್ರಗತಿ ಬಗ್ಗೆ.

ಶ್ರೀ ವಿ ಮುನಿಯಪ್ಪ (ಶಿಡ್ಲಘಟ್ಟ): ಮಾನ್ಯ ಅಧ್ಯಕ್ಷರೆ, ಪಶ್ಚಿಮ ಘಟ್ಟಗಳಿಂದ ಹರಿದು ವ್ಯರ್ಥವಾಗಿ ಸಮುದ್ರ ಸೇರುತ್ತಿರುವ ನೀರನ್ನು ಬಯಲುಸೀಮೆ ಪ್ರದೇಶಗಳಿಗೆ ಕುಡಿಯುವ ನೀರಿನ ಉಪಯೋಗಕ್ಕಾಗಿ ಡಾ: ಪರಮಶಿವಯ್ಯನವರ ವರದಿಯನ್ನಾಧರಿಸಿ N.R.S.A ಸಂಸ್ಥೆಗೆ ಸಮೀಕ್ಷೆ ನಡೆಯಲು ವಹಿಸಿದ್ದು ಈ ಕುರಿತಂತೆ ಇತ್ತೀಚಿನ ವರದಿ ಹಾಗೂ ಪ್ರಗತಿ ಬಗ್ಗೆ ಮಾನ್ಯ ಜಲಸಂಪನ್ಮೂಲ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಬಸವರಾಜ ಬೊಮ್ಮಾಯಿ(ಜಲಸಂಪನ್ಮೂಲ ಸಚಿವರು): ಮಾನ್ಯ ಅಧ್ಯಕ್ಷರೆ,

ಕರ್ನಾಟಕ ರಾಜ್ಯದಲ್ಲಿ ಲಭ್ಯವಿರುವ ಹೆಚ್ಚುವರಿ ನೀರನ್ನು ಉಪಯುಕ್ತವಾಗಿ ಬಳಸಿಕೊಳ್ಳಲು ಶ್ರೀ ಜಿ.ಎಸ್. ಪರಮಶಿವಯ್ಯನವರು ರೂಪಿಸಿರುವ ಯೋಜನೆಯ ಸಂಬಂಧವಾಗಿ ವೈಮಾನಿಕ ತನಿಖೆ, ಸಮೀಕ್ಷೆ ಹಾಗೂ ವಿವರವಾದ ಯೋಜನಾ ವರದಿಯ ತಯಾರಿಕೆಯ ಕಾರ್ಯಕ್ಕಾಗಿ ಮೆ: ಎನ್.ಆರ್.ಎಸ್.ಸಿ. ಸಂಸ್ಥೆ, ಹೈದರಾಬಾದ್ ಇವರೊಂದಿಗೆ ರೂ.15,494 ಕೋಟಿಗಳ ಅಂದಾಜು ವೆಚ್ಚದ ಒಡಂಬಡಿಕೆಯನ್ನು ದಿನಾಂಕ: 12.09.2003